## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.

## ಸಿ.ಸಿ.ನಂ.480/2018

| | | | |
|---|---|---|---|
| ಸಾಕ್ಷಿದಾರರ ಹೆಸರು | ಕೆ.ಆರ್ ಗೋವಿಂದಪ್ಪ | ಸಿಡಬ್ಲ್ಯೂ | 14 |
| ತಂದೆಯ ಹೆಸರು | ರಾಮಪ್ಪ | ಪಿಡಬ್ಲ್ಯೂ | 2 |
| ವಯಸ್ಸು | 65 ವರ್ಷ | | |
| ಉದ್ಯೋಗ | ನಿವೃತ್ತ ಪಿ.ಐ | | |
| ವಾಸಸ್ಥಳ | ದಾವಣಗೆರೆ | | |

**ದಿಃ25.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಾಕ್ಷಿದಾರರ ಮುಖ್ಯ ವಿಚಾರಣೆಯನ್ನು ಭಾ.ದಂ.ಸಂ ಕಲಂ299 ರಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ.**

1) 2009 ರಿಂದ 2012 ಸೆಪ್ಟೆಂಬರವರೆಗೆ ನಾನು ಹಾವೇರಿ ಶಹರ ಪೊಲೀಸ ಠಾಣೆಯಲ್ಲಿ ಪಿ.ಎಸ್.ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ 17.05.2011 ರಂದು ಚಾ.ಸಾ-13 ರವರಿಂದ ಈ ಕೇಸಿನ ಕಡತವನ್ನು ಪಡೆದು, ಪರಿಶೀಲಿಸಿ ತನಿಖೆ ಮುಂದುವರೆಸಿದ್ದೇನೆ. ದಿನಾಂಕಃ 18.05.2011 ರಂದು ಹಾವೇರಿಯ ಶಿವಾಜಿನಗರದಲ್ಲಿರುವ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಬೇಟಿಕೊಟ್ಟು ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಪಿರ್ಯಾದಿಯ ಮರು ಹೇಳಿಕೆ ಪಡೆದಿದ್ದೇನೆ. ಸ್ಥಳ ಪಂಚನಾಮೆಯನ್ನು ಮೂಲ ಪ್ರಕರಣದ ಘಟನಾ ಸ್ಥಳದ ಪಂಚನಾಮೆಯನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಲಾಗಿರುತ್ತದೆ.. ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

**2)** ದಿನಾಂಕಃ 20.05.2011 ರಂದು ಚಾ.ಸಾ-7 ರಿಂದ ಚಾ.ಸಾ-9 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ದಿನಾಂಕಃ 06.06.2011 ರಂದು ಚಾ.ಸಾ-10 ಮತ್ತು 11 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ದಿನಾಂಕಃ 15.06.2011 ರಂದು ಚಾ.ಸಾ-1 ರವರು ಠಾಣೆಗೆ ಹಾಜರಾಗಿ ಸಂಬಂಧಪಟ್ಟ 17 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಪಂಚರ ಸಮಕ್ಷಮ ಜಪ್ತು ಮಾಡಿಕೊಂಡಿದ್ದೇನೆ. ಜಪ್ತು ಪಂಚನಾಮೆಯನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ಈಗಾಗಲೇ ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ದಾಖಲೆಗಳನ್ನು ಮಾಲುಪಟ್ಟಿ ಸಂಖ್ಯೆ: 38/2011 ರಲ್ಲಿ ಅಳವಡಿಸಿದ್ದೇನೆ. ಮಾಲುಪಟ್ಟಿಯನ್ನು ಅದನ್ನು ಈಗಾಗಲೇ ನಿ.ಪಿ-5 ಎಂದು ಗುರುತಿಸಲಾಗಿರುತ್ತದೆ. ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. 17 ನಕಲು ಪ್ರತಿಗಳನ್ನು ಗುರುತಿಸಿದ್ದು, ಈ ಹಂತದಲ್ಲಿ ಶ್ರೀ.ಪಿ.ಸಿ.ಬಿ ವಕೀಲರು ತಕರಾರು ಮಾಡಿರುತ್ತಾರೆ. ದಾಖಲೆಗಳು ಠಾಣಾಧಿಕಾರಿ ದೃಢೀಕರಿಸಿದ ದಾಖಲೆಗಳು ಆಗಿರುತ್ತವೆ. ಆದ್ದರಿಂದ ತಕರಾರಿಗೊಳಪಡಿಸಿ ನಿ.ಪಿ-6 ರಿಂದ ನಿ.ಪಿ-22 ಎಂದು ಗುರುತಿಸಲಾಗಿರುತ್ತದೆ. ಚಾ.ಸಾ-1 ರವರ ಮರುಹೇಳಿಕೆಯನ್ನು ಮೂಲಪ್ರಕರಣದಲ್ಲಿ ಪಡೆದಿದ್ದೇನೆ.

**3)** ದಿನಾಂಕಃ 16.07.2011 ರಂದು ದಾವಣಗೆರೆಯ ಐ.ಸಿ.ಐ.ಸಿ.ಐ ಬ್ಯಾಂಕಗೆ ಮೂಲ ಡಿ.ಡಿ.ಯನ್ನು ಪೂರೈಸುವಂತೆ ಪತ್ರವನ್ನು ಬರೆದಿದ್ದೇನೆ. ದಿನಾಂಕಃ 16.11.2011 ರಂದು ಠಾಣಾ ಪಿ.ಸಿ 1350 ರ ಮೂಲಕ ಡಿ.ಡಿ.ಗೆ ಸಂಬಂಧಿಸಿದ ದಾಖಲೆಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಐ.ಸಿ.ಐ.ಸಿ.ಐ ಬ್ಯಾಂಕನ ಲೆಕ್ಕ ತಃಖ್ತೆಯ ಪ್ರತಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ-23 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ-

23(ಎ) ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ದಿನಾಂಕಃ 31.03.2010 ರ ಪತ್ರದ ಪ್ರತಿಯನ್ನು ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ-24 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ-24(ಎ) ಎಂದು ಗುರುತಿಸಲಾಗಿರುತ್ತದೆ. ಬಾಂಡ ಪ್ರತಿಯನ್ನು ಗುರುತಿಸಿದ್ದು, ನಿ.ಪಿ-25 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ., ಸಾಕ್ಷಿಯ ಸಹಿಯನ್ನು ನಿ.ಪಿ-25(ಎ) ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಐ.ಸಿ.ಐ.ಸಿ.ಐ ಬ್ಯಾಂಕನ ಮತ್ತೊಂದು ಲೆಕ್ಕತಃಖ್ತೆಯ ಪ್ರತಿಯನ್ನು ಗುರುತಿಸಿದ್ದು ನಿ.ಪಿ-26 ಎಂದು ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. , ಸಾಕ್ಷಿಯ ಸಹಿಯನ್ನು ನಿ.ಪಿ-26(ಎ) ಎಂದು ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. .

**4)** ದಿನಾಂಕಃ 16.04.2012 ರಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಪತ್ರ ಬರೆದಿದ್ದೇನೆ. ದಿನಾಂಕಃ 19.05.2012 ರಂದು ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ದೃಢೀಕೃತ ದಾಖಲೆಗಳನ್ನು ಸ್ವೀಕರಿಸಿದ್ದೇನೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಪತ್ರದ ಪ್ರತಿಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-27 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ-27(ಎ) ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ದಿನಾಂಕಃ 04.02.2010 ರ ನಿಬಂಧನೆಗಳು ಮತ್ತು ಷರತ್ತುಗಳ ಪ್ರತಿಯನ್ನು ನಿ.ಪಿ-28 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ-28(ಎ) ಎಂದು ಗುರುತಿಸಲಾಗಿರುತ್ತದೆ. ಹರಾಜು ಪ್ರಕಟಣೆ ಪ್ರತಿಯನ್ನು ನಿ.ಪಿ-29 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ-29(ಎ) ಎಂದು ಗುರುತಿಸಲಾಗಿರುತ್ತದೆ. ಮತ್ತೊಂದು ಹರಾಜು ಪ್ರಕಟಣೆಯ ಪ್ರತಿಯನ್ನು ನಿ.ಪಿ-30 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ-30(ಎ) ಎಂದು

ಗುರುತಿಸಲಾಗಿರುತ್ತದೆ.. ದಿನಪತ್ರಿಕೆಯ ಪ್ರಕಟಣೆಯ ಪ್ರತಿಯನ್ನು ನಿ.ಪಿ-31 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ-31(ಎ) ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.. 1 ನೇ ಆರೋಪಿ ನಿರೀಕ್ಷಣಾ ಜಾಮೀನನ್ನು ಪಡೆದು ಠಾಣೆಗೆ ಹಾಜರಾದ ಮೇರೆಗೆ ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇನೆ. ತನಿಖೆ ಪೂರ್ಣಗೊಳಿಸಿ ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದೇನೆ. ಮೂಲ ಪ್ರಕರಣದಲ್ಲಿ 2 ನೇ ಆರೋಪಿಯು ತಲೆ ಮರೆಸಿಕೊಂಡಿದ್ದರಿಂದ ಆತನ ವಿರುದ್ಧ ಪ್ರಕರಣವನ್ನು ಮೂಲ ಪ್ರಕರಣದಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ದಾಖಲಿಸಲಾಗಿರುತ್ತದೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.